# Medico Legal Section Article

## ಸುಪ್ರೀಂ ಕೋರ್ಟ್ ತೀರ್ಪುಗಳ ಆಧಾರದ ಮೇಲೆ ವೈದ್ಯರ ಮೇಲೆ FIR ಮತ್ತು Arrest Warrant ಯಾವಾಗ ಸಾಧ್ಯ, ಯಾವಾಗ ಸಾಧ್ಯವಿಲ್ಲ?

1 (Jacob Mathew vs State of Punjab 2025)

**ವೈದ್ಯರ ಮೇಲಿನ FIR ಮತ್ತು ಅರೆಸ್ಟ್ ಕುರಿತು ಅತ್ಯಂತ ಪ್ರಮುಖ ತೀರ್ಪು.**

ಸುಪ್ರೀಂ ಕೋರ್ಟ್ ಹೇಳಿದ್ದು.ಪ್ರತಿ ವೈದ್ಯಕೀಯ ವಿಫಲತೆ ಅಪರಾಧವಲ್ಲ.ವ್ಯದ್ಯರ ಮೇಲೆ IPC 304A (ನಿರ್ಲಕ್ಷ್ಯದಿಂದ ಮರಣ) ಅಡಿಯಲ್ಲಿ ಕೇಸ್ ಹಾಕಲು :"(Gross / criminal negligence) ಗಂಬೀರ ಅಪರಾಧಾತ್ಮಕ ನಿರ್ಲಕ್ಷ್ಯ" ಇರಬೇಕು. ವೈದ್ಯಕೀಯ ತಜ್ಞರ ಅಭಿಪ್ರಾಯ (Expert Medical Opinion) ಇಲ್ಲದೆ:FIR ದಾಖಲು ಮಾಡಬಾರದು. ಆರೆಸ್ಟ್ ಮಾಡಬಾರದು. "Doctor should not be arrested in a routine manner ." ವೈದ್ಯರ ಬಂಧನವನ್ನು ಸಾಮಾನ್ಯ ಪ್ರಕ್ರಿಯೆಯಂತೆ ಕೈಗೊಳ್ಳಬಾರದು.

2 ( Martin F. D'Souza VS Mohd. Ishfaq 2009)

**ಕೋರ್ಟ್ ಮಾರ್ಗಸೂಚಿ:**

ರೋಗಿ ಅಥವಾ ಸಂಬಂಧಿಕರ ದೂರು ಬಂದ ತಕ್ಷಣ:ಪೊಲೀಸ್ ಅಥವಾ ಮ್ಯಾಜಿಸ್ಟ್ರೇಟ್ FIR ಮಾಡಬಾರದು. ಮೊದಲು ಸರ್ಕಾರಿ ವೈದ್ಯಕೀಯ ಮಂಡಳಿ / ತಜ್ಞರಿಂದ ಅಭಿಪ್ರಾಯ ಪಡೆಯಬೇಕು.ತಜ್ಞರು ಗಂಭೀರ ಅಪರಾಧಾತ್ಮಕ ನಿರ್ಲಕ್ಷ ಇದೆ ಎಂದರೆ ಮಾತ್ರ ಮುಂದಿನ ಕ್ರಮ.ಇದರಿಂಧ ವೈದ್ಯರಿಗೆ:ಅನಗತ್ಯ ಕೇಸ್‌ಗಳಿಂದ ರಕ್ಷಣೆ. ಭಯದ ವಾತಾವರಣ ತಪ್ಪಿಸಲು ಕೋರ್ಟ್ ಸ್ಪಷ್ಟ ಸೂಚನೆ.

3 **Dr. Suresh Gupta Case (2004)**

**ತೀರ್ಪಿ ಸಾರ**

ಕೇವಲ ಅಜಾಗರೂಕತೆ ಅಥವಾ (error judgment) ಆ ಕ್ಷಣದ ನಿರ್ಣಯ ದೋಷದ ಒಂದೇ ಕಾರಣದಿಂದ ವೈದ್ಯರ ಮೇಲೆ.ಕ್ರಮಿನಲ್ ಕೇಸ್ ಅಡಿಯಲ್ಲಿ FIR ಮಾಡುವಂತಿಲ್ಲ.

**KPME Act + IPC = ಏನು ಹೇಳುತ್ತದೆ?**

KPME Act ಉಲ್ಲಂಘನೆ. –> ದಂಡ / ಲೈಸೆನ್ಸ್ ರದ್ದು / ಆಡಳಿತಾತ್ಮಕ ಕ್ರಮ. **IPC 304A / 337 / 338** FIR ಸಾಧ್ಯಾ ಆದರೆ ಸುಪ್ರೀಂ ಕೋರ್ಟ್ ಮಾರ್ಗಸೂಚಿ ಪಾಲಿಸಬೇಕು. ಅಂತಿಮವಾಗಿ ಸ್ಪಷ್ಟ ಉತ್ತರ.

( Jacob Mathew vs State of Punjab, 2005)

**FIR ಆದರೂ ವೈದ್ಯರಿಗೆ ರಕ್ಷಣೆ ಇರುವ ಪ್ರಮುಖ ಕಾರಣಗಳು.**

1. ಅರೆಸ್ಟ್ ಸ್ವಯಂಚಾಲಿತ ಅಲ್ಲ. FIR -> ಅರೆಸ್ಟ್ ಕಡ್ಡಾಯವಲ್ಲ. ವೈದ್ಯಕೀಯ ಪ್ರಕರಣಗಳಲ್ಲಿ : Expert Medical Opinion ಇಲ್ಲದೆ ಅರೆಸ್ಟ್ ಮಾಡಬಾರದು. Routine arrest ತಪ್ಪು. ಸಹಕರಿಸಿದರೆ ಅರೆಸ್ಟ್ ಅಗತ್ಯವೇ ಇಲ್ಲ. ತನಿಖೆಗೆ ಸಹಕರಿಸಿದರೆ. ದಾಖಲೆಗಳನ್ನು ನೀಡಿದರೆ. ಸಾಕ್ಷ್ಯನಾಶ ಮಾಡದಿದ್ದರೆ. –> ಅರೆಸ್ಟ ಮಾಡುವ ಅಗತ್ಯವೇ ಬರುವುದಿಲ್ಲ.

**ಹಾಗದರೆ ವೈದ್ಯರು ಏನು ಮಾಡಬೇಕು? (ಬಹಳ ಮುಖ್ಯ)**

FIR ಆದ ತಕ್ಷಣ :

- ಒಳ್ಳೆಯ ವಕೀಲರನ್ನು ಸಂಪರ್ಕಿಸಿ.
- ಎಲ್ಲಾ ವೈದ್ಯಕೀಯ ದಾಖಲೆಗಳನ್ನು ಸುರಕ್ಷಿತವಾಗಿ ಉಳಿಸಿ.
- ತನಿಖೆಗೆ ಸಹಕರಿಸಿ.
- ಅಗತ್ಯವಿದ್ದರೆ ನಿರೀಕ್ಷಣ ಜಾಮೀನಿ ಅರ್ಜಿ ಸಲ್ಲಿಸಿ.
- ಆಸ್ಪತ್ರೆ / KPME ನೋದಣಿ ದಾಖಲೆ ಸಿದ್ದವಾಗಿ ಇಟ್ಟುಕೊಳ್ಳಿ.

**ಅರೆಸ್ಟ್ ವಾರೆಂಟ್... ಯಾವಾಗ ಭಯಪಡಬೇಕು?**

**ಈ ಸಂದರ್ಭಗಳಲ್ಲಿ ಮಾತ್ರ :**

Expert Medical Board ಸ್ಪಷ್ಟವಾಗಿ. ವೈದ್ಯಕೀಯ ನಿರ್ಲಕ್ಷ / ಗಂಭಿರ ನಿರ್ಲಕ್ಷತೆ ಎಂದು ಅಭಿಪ್ರಯ ಪಟ್ಟರೆ. ಗಂಭೀರವಾದ ಅಪರಾಧಾತ್ಮಕ ಇದೆ ಎಂದರೆ. ತನಿಖೆಗೆ ಸಹಕರಿಸದಿದ್ದರೆ.ಸಾಕ್ಷ್ಯ ನಾಶ ಮಾಡುವ ಪ್ರಯತ್ನ. ಮರುಮರು ಸಮನ್ಸ್ ನಿರ್ಲಕ್ಷ್ಯ –> ಇವು ಇಲ್ಲದಿದ್ದರೆ ಭಯಪಡುವ ಅಗತ್ಯವಿಲ್ಲ. ಸರಳ ಉದಾಹರಣೆ. ರೋಗಿ ಮೃತಪಟ್ಟಿದಾನೆ FIR ಆಯಿತು. ವೈದ್ಯರು SOP ಪಾಲಿಸಿದ್ದಾನೆ –> ದಾಖಲೆ ಸರಿಯಾಗಿದೆ. Expert opinion ಇಲ್ಲ –> ಕೇಸ್ ಬಹುಶಃ ರದ್ದು / ಕ್ಲೋಸ್ ಅಂತಿಮವಾಗಿ FIR = ತಪ್ಪು ಸಾಬೀತು FIR = ತಕ್ಷಣ ಅರೆಸ್ಟ್ ಇಲ್ಲ. FIR = ಕಾನೂನು ಪ್ರಕ್ರಿಯೆಯ ಆರಂಭ ಮಾತ್ರ.

**FIR ಆದ ಕ್ಷಣದಿಂದ ಕೇಸ್ ಕ್ಲೋಸ್ ಆಗುವವರೆಗೂ ಏನು ಮಾಡಬೇಕು?**

**DOCTOR LEGAL SUPPORT KIT. ವೈದ್ಯರ ಕಾನೂನು ಸಹಾಯ ಕಿಟ್.**

**1 FIR ಆದ ತಕ್ಷಣ –**

**ಮೊದಲ 12 ಗಂಟೆ. ಮಾಡಬೇಕಾದದ್ದು.**

FIR ಪ್ರತಿ ಪಡೆಯಿರಿ ( IPC section ಗಮನಿಸಿ ) ನಿಮ್ಮ ಪರಿಚಯದ ವಕೀಲರನ್ನು ಸಂಪರ್ಕಿಸಿ.. ನೀವು ಕೆಲಸದ ಸ್ಥಳದ ಆಸ್ಪತ್ರೆಯ ಮ್ಯಾನೇಜ್ಮೆಂಟ್ ಅವರಿಗೆ ಮಾಹಿತಿ ಕೊಡಿ. ಸಾಮಾಜಿಕ ಜಾಲ ತಾಣಗಳಲ್ಲಿ ಈ ಚರ್ಚೆ ಮಾಡಬೇಡಿ. ಪೋನ್ ಅಲ್ಲಿ ಕೂಡ ಬೇಡ. ದಾಖಲೆಗಳನ್ನು ತಿದ್ದುವ ಮತ್ತು ನಾಶ ಪಡಿಸುವಿಕೆ ಬೇಡ (ಇದು ಕ್ರಿಮಿನಲ್ ಅಪರಾಧ).

**2 ದಾಖಲೆಗಳ (documentation ) ರಕ್ಷಣೆ ಪ್ಲಾನ್.**

ಅತಿ ಅವಶ್ಯ ಇರುವ. ಒಂದು folder ಮಾಡಿ ( originals + photocopies): ಹೊರ ಮತ್ತು ಒಳರೋಗಿ ಕೇಸ್ ಶೀಟ್. ಒಪ್ಪಿಗೆ ಪತ್ರ. ನರ್ಸಿಂಗ ನೋಟ್ಸ್. ರೋಗಿ ಪರೀಕ್ಷೆ ರಿಪೋರ್ಟ್. ಟ್ರೀಟ್ಮೆಂಟ್ ಚಾರ್ಟ್. ರೆಫರಲ್ ಚಾರ್ಟ್. ಮರಣ ಪತ್ರ/ ಡಿಸ್ಚಾರ್ಜ್ ಪತ್ರ.

**ಮೂಲಭೂತ ನಿಯಮ.**

ಕೇಸ್ ಶೀಟ್‌ನಲ್ಲಿ ನಮೂದಾಗಿದ್ದರೆ ಮಾತ್ರ ವೈದ್ಯರು ಚಿಕಿತ್ಸೆ ನೀಡಿದ್ದಾರೆ ಅಂತ ಅರ್ಥ. ಕೇಸ್ ಶೀಟ್‌ನಲ್ಲಿ ನಮೂದಾಗಿರದಿದ್ದರೆ ನಿವು ಚಿಕಿತ್ಸೆ ನೀಡಿಲ್ಲವೆಂದು ಆರ್ಥ. (court ದೃಷ್ಟಿಯಲ್ಲಿ)

**3 ಪೊಲೀಸ್ ಅಧಿಕಾರಿ ಮುಂದೆ ಹೇಳಿಕೆ ದಾಖಲು ಮಾಡುವ ಸಮಯದಲ್ಲಿ ನೀವು ಅನುಸರಿಸಬೇಕಾದ ನಿಯಮಗಳು.**

"ನಾನು ಪ್ರಮಾಣಿತ ವಿಧಾನ ಮತ್ತು ಅಂಗಿಕೃತ ವಿಧಾನದ ಪ್ರಕಾರ ಚಿಕಿತ್ಸೆ ನೀಡಿದ್ದೇನೆ. ದಾಖಲೆಗಳು ನಮ್ಮ ಬಳಿ ಇವೆ. ತಜ್ಞ ವೈದ್ಯರ ವರದಿ ಬಂಧ ನಂತರ ಹೆಚ್ಚಿನ ವಿವರ ನೀಡುತ್ತೇನೆ"

**ಈ ಮಾತುಗಳನ್ನು ಎಂದಿಗೂ ಬಳಸಬೇಡಿ:**

ಹೌದು ಚಿಕಿತ್ಸೆ ನೇಡಲು ವಿಳಂಬ ಆಯ್ತು" "Risk ಜಾಸ್ತಿ ಇತ್ತು." ಪರಿಣಾಮದ ಬಗ್ಗೆ ಮಾಹಿತಿ ಇದ್ದಿಲ್ಲ.

**ನಿರೀಕ್ಷಣಾ ಜಾಮೀನು . ಯಾವಾಗ ಕಡ್ಡಯ?**

IPC 304A/338 mention ಇದ್ದರೆ. ಸಾಮಾನ್ಯವಾಗಿ ಅಂದೇ ಜಾಮೀನು ! ಸಿಗುತ್ತದೆ.

**4 Medical Board / Expert Opinion – ಹೇಗೆ ತಯಾರಿ?**

**Board ನೋಡುವುದು :**

Sop follow ಆಗಿದೆಯಾ? Consent proper ಇದೆಯಾ ? Referral delay ಇದೆಯಾ? Documentation clarity ಇದೆಯಾ ನಿಮ್ಮ ವಕೀಲರ ಮೂಲಕ ಲಿಖಿತವಾದ ಸಲ್ಲಿಕೆ. ಇಲ್ಲಿ ತಜ್ಞ ವೈಧ್ಯರ ಪ್ರಮಾಣ ಪತ್ರ ಕೇಸ್‌ನಲ್ಲಿ ಪ್ರಮುಖ ಪಾತ್ರ.

**ಚಾರ್ಜ್ ಶೀಟ್ ಪ್ರಕಾರ ದಾಖಲಾತಿ ಸಲ್ಲಿಸಿ ವಿಚಾರಣೇ ಮುಗಿದಾಗ. ನಿಮ್ಮ ವಕೀಲರು ಆರೋಪ ಮುಕ್ತಿ ಅರ್ಜಿ ಸಲ್ಲೀಸುವಿಕೆ. ಬಹುತೇಕ ಕೇಸ್ ಗಳು .....**

**NO MENS REA ಅಡಿಯಲ್ಲಿ ಮುಕ್ತಾಯಗೊಳ್ಳುತ್ತವೆ.**

## 1 NO MENS REA – ಉದ್ದೇಶದ ಕೊರತೆ ಎಂದರೇನು ?

ಅರ್ಜಿದಾರರಾದ ವೈಧ್ಯರಿಗೆ ಯಾವುದೇ ಅಪರಾಧ ಮನೋಭಾವ (**mens rea**) ಇಲ್ಲ. ರೋಗಿಗೆ ಹಾನಿ ಮಾಡುವ ಉದ್ದೇಶ ಇರದೆ, ಕೇವಲ ರೋಗಿಯ ಜೀವ ಉಳಿಸುವ ಉದ್ದೇಶದಿಂದಲೇ ಚಿಕಿತ್ಸೆ ನೀಡಲಾಗಿದೆ. NO Gross negligence – ತೀರ್ವ ನಿರ್ಲಕ್ಷ್ಯ ಇಲ್ಲ . ಚಿಕಿತ್ಸೆ ವೇಳೆ ಉಂಟಾದ ಸಂಕೀರ್ಣತೆ ಅಥವಾ ನಿರ್ಧಾರದಲ್ಲಿ ಉಂಟಾದ ತಪ್ಪಾಗಿರಬಹುದು. ಆದರೆ ಇದನ್ನು ತೀವ್ರ ಅಥವಾ ಕಿಮಿನಲ್ ನಿರ್ಲಕ್ಷ್ಯ ಎಂದು ಕರೆಯಲು ಸಾಧ್ಯಾವಿಲ್ಲ. ಅಂಗೀಕೃತ ವೈದ್ಯಕೀಯ ಮಾರ್ಗಸೂಚಿ ಮತ್ತು ಮಾನ್ಯ ಚಿಕಿತ್ಸಾ ವಿಧಾನಗಳನ್ನು.ಸಂಪೂರ್ಣವಾಗಿ ಪಾಲಿಸಲಾಗಿದೆ.ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿರುವಂತೆ. ತೀವ್ರ ನಿರ್ಲಕ್ಷ್ಯದ ಪ್ರಾಥಮಿಕ ಸಾಕ್ಷ್ಯವಿಲ್ಲದೆ ವೈದ್ಯರ ಮೇಲೆ ಕ್ರಮಿನಲ್ ಕ್ರಮ ಕೈಗೊಳ್ಳಬಾರದು. ದುರ್ಘಟನೆಯಿಂದ ಉಂಟಾದ ಭಾವನಾತ್ಮಕ ನೋವಿನ ಪರಿಣಾಮವಾಗಿ ಈ FIR ದಾಖಲಿಸಲಾಗಿದ್ದು.ಇದು ಕಾನೂನು ಪ್ರಕ್ರಿಯೆಯ ದುರುಪಯೋಗವಾಗಿದೆ. ಈ ಪ್ರಕರಣವು ಸಂಪೂರ್ಣವಾಗಿ ವೈದ್ಯಕೀಯ ದಾಖಲೆಗಳ ಮೇಲೆ ಆಧಾರಿತವಾಗಿರುವುದರಿಂದ.ಅರ್ಜಿದಾರರನ್ನು ಬಂಧಿಸುವ ಅಗತ್ಯವೇ ಇಲ್ಲ. ಆರ್ಜಿದಾರರು ತನಿಖೆಗೆ ಸಂಪೂರ್ಣ ಸಹಕಾರ ನೀಡುವುದಾಗಿ ಹಾಗೂ ಮಾನ್ಯ ನ್ಯಾಯಾಲಯ ವಿಧಿಸುವ ಎಲ್ಲಾ ಷರತ್ತುಗಳನ್ನು ಪಾಲಿಸುವುದಾಗಿ ಭರವಸೆ ನೀಡುತ್ತಾರೆ. ಇಲ್ಲಿ ಅಪರಾಧ ಉದ್ದೇಶವೂ ಇಲ್ಲ. ತೀವ್ರ ನಿರ್ಲಕ್ಷ್ಯವೂ ಇಲ್ಲ : ಆದರಿಂದ ಅರ್ಜಿದಾರರ ಮೇಲೆ ಯಾವುದೇ ಕ್ರಿಮಿನಲ್ ಹೊಣೆಗಾರಿಕೆ ವಿಧಿಸಲು ಸಾಧ್ಯವಿಲ್ಲ.

**ಒಂದು ವೇಳೆ FIR ಯಿಂದ ನಿಮ್ಮ ಮುಂದಿನ ಭವಿಷ್ಯತನಲ್ಲಿ ತೊಂದರೆ ಆಗುವ ಸಂಭವ ಇದ್ದರೆ**

**FIR ರದ್ದುಪಡಿಸುವ ಅರ್ಜಿ ((FIR Quash Petition) ಕರಡು.**

**ಮಾನ್ಯ ನ್ಯಾಯಾಲಯದ ಮುಂದೆ ಸಲ್ಲಿಸಬಹುದು.**

ಅರ್ಜಿದಾರರಾದ ವೈಧ್ಯರು ತಮ್ಮ ವೃತ್ತಿಪರ ಕರ್ತವ್ಯವನ್ನು ಪ್ರಮಾಣಿತ ಕಾರ್ಯವಿಧಾನ (SOP) ಮತ್ತು ಅಂಗೀಕೃತ ಪದ್ದತಿ ಅನುಸರಿಸಿ ನಿರ್ವಹಿಸಿದ್ದಾರೆ. ಈ ಪ್ರಕರಣದಲ್ಲಿ ಕೇವಲ ನಿರ್ಣಯದ ದೋಷ ಅಥವಾ ಅಜಾಗರೂಕತೆ ಎಂಬ ಆರೋಪ ಮಾತ್ರವಿದ್ದು. ಇದು ಗಭೀರ ಅಪರಾಧಾತ್ಮಕ ನಿರ್ಲಕ್ಷ್ಯದ ಮಟ್ಟಕ್ಕೆ ತಲುಪುವುದಿಲ್ಲ. ತಜ್ಞ ವೈದ್ಯಕೀಯ ಅಭಿಪ್ರಾಯ ಪಡೆಯದೇ FIR ದಾಖಲಿಸಲಾಗಿದೆ. ಸುಪ್ರೀಂ ಕೋರ್ಟ್ ಮಾರ್ಗಸೂಚಿಗಳ ಪ್ರಕಾರ ವೈದ್ಯರ ವಿರುದ್ದ ರೂಢಿಮಟ್ಟದಲ್ಲಿ FIR ದಾಖಲಿಸುವುದು. ಅನುಚಿತವಾಗಿದೆ. ಮಾರ್ಗಸೂಚಿಗಳು ಹಾಗೂ ಪಠ್ಯಪುಸ್ತಕ ಉಲ್ಲೇಖಗಳು ಆಧರಿಸಿ ನೀಡಲಾಗಿದ್ದು,As written, as treated ಎಂಬ ದಾಖಲೆ ಸ್ಪಷ್ಟತೆಯಿದೆ. ಅರ್ಜಿದಾರರಿಗೆ ಹಾನಿ ಮಾಡುವ ಅಥವಾ ಕೊಲೆ ಮಾಡುವ ಯಾವುದೇ ಪ್ರೇರಣೆ ಇರಲಿಲ್ಲ. ಆದ್ದರಿಂದ. ಈ FIR ಮುಂದುವರಿಸುವುದು. ಕಾನೂನು ಪ್ರಕ್ರಿಯೆಯ ದುರುಪಯೋಗವಾಗಿರುವುದರಿಂದ. FIR ರದ್ದುಪಡಿಸಲು ಮಾನ್ಯ ನಾಯಾಲಯವನ್ನು ವಿನಂತಿಸಲಾಗುತ್ತದೆ.

**ಡಾಕ್ಟರ್ ಶಿವರಾಜ್ ಪಾಟೀಲ್,**
**ಮಕ್ಕಳ ತಜ್ಞರು ಮತ್ತು**
**ಕಾನೂನ ಅಧ್ಯಯನ ವಿದ್ಯಾರ್ಥಿ.**
**ಸಿಂಧನೂರು.**